MARCH 07, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಇಂದು ಬೆಳಗ್ಗೆ 10.15ಕ್ಕೆ, ಬಜೆಟ್ ಮಂಡನೆ: ಕೃಷಿ, ಆರೋಗ್ಯ ಹಾಗೂ ಶಿಕ್ಷಣಕ್ಕೆ ಒತ್ತು – ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ.**
- **ಸಮಗ್ರ ಉತ್ತರ ಕರ್ನಾಟಕದ ಅಭಿವೃದ್ಧಿಗೆ, ರಾಜ್ಯ ಬಜೆಟ್‌ನಲ್ಲಿ, ಪ್ರಾವಧಾನಕ್ಕೆ ವಿಪಕ್ಷಗಳ ಒತ್ತಾಯ.**
- **ವಿಶ್ವದ ಮೂರನೇ ಒಂದು ಭಾಗದಷ್ಟು ಆಹಾರ ಉತ್ಪಾದನೆಗೆ, ಜೇನು ದುಂಬಿಗಳು ಸಹಕಾರಿ – ಪೂನಂ ಜಸ್ರೋಟಿಯಾ.**
- **ಇಂದು 'ಜನೌಷಧಿ' ದಿನ: 'ಕಡಿಮೆ ಬೆಲೆ, ಅತ್ಯುತ್ತಮ ಔಷಧ' ಧ್ಯೇಯದೊಂದಿಗೆ, 7ನೇ ವಾರ್ಷಿಕೋತ್ಸವ.**

<><><>

**ಈಗ ವಾರ್ತೆಗಳ ವಿವರ**

<><><>

**ಹಣಕಾಸು ಖಾತೆಯನ್ನೂ ಹೊಂದಿರುವ, ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಬೆಳಗ್ಗೆ 10.15ಕ್ಕೆ, 2025–26ನೇ ಸಾಲಿನ, ಬಜೆಟ್ ಮಂಡಿಸಲಿದ್ದಾರೆ. ರಾಜ್ಯದ ಹಣಕಾಸು ಖಾತೆ ಸಚಿವರಾಗಿ, 16ನೇ ಬಾರಿಗೆ ಮುಂಗಡ ಪತ್ರವನ್ನು ಮಂಡಿಸಿ, ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ, ಕೀರ್ತಿಗೆ ಅವರು ಭಾಜನರಾಗಲಿದ್ದಾರೆ.**

<><><>

**ಈ ಬಾರಿಯ ಬಜೆಟ್‌ನಲ್ಲಿ ಕೃಷಿ, ಆರೋಗ್ಯ ಹಾಗೂ ಶಿಕ್ಷಣಕ್ಕೆ ಒತ್ತು ನೀಡಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬಜೆಟ್ ಎಂಬುದು ಬರಿ ಹಾಳೆಗಳ ಮೇಲಿನ ಲೆಕ್ಕವಲ್ಲ; ರಾಜ್ಯದ ಏಳು ಕೋಟಿ ಕನ್ನಡಿಗರ ಭವಿಷ್ಯ ರೂಪಿಸುವ ಕೈಪಿಡಿ ಎನ್ನುವುದು ತಮ್ಮ ನಂಬಿಕೆ. ನಾಡಿನ ಪ್ರತಿಯೊಬ್ಬ ಪ್ರಜೆಯನ್ನು, ಸರ್ಕಾರದ ಯಾವುದಾದರೊಂದು ಯೋಜನೆಯ ಫಲಾನುಭವಿಯನ್ನಾಗಿಸುವ, ಪ್ರಾಮಾಣಿಕ ಪ್ರಯತ್ನವನ್ನು, ಬಜೆಟ್ ಮೂಲಕ ಮಾಡಿದ್ದೇವೆ ಎನ್ನುವ ಭರವಸೆ ಇದೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಅವರು ತಿಳಿಸಿದ್ದಾರೆ.**

<><><>

ಬಜೆಟ್ ಕುರಿತ ಸಂಪೂರ್ಣ ಮಾಹಿತಿ, ಇಂದು ಮಧ್ಯಾಹ್ನ 12, 2:30 ಹಾಗೂ ಸಂಜೆ 6:40 ರ ಪ್ರದೇಶ ಸಮಾಚಾರದಲ್ಲಿ, ಪ್ರಸಾರವಾಗಲಿದೆ.

<><><>

ಇಂದು ರಾತ್ರಿ 8 ರಿಂದ 8:30ರ ವರೆಗೆ, ಬಜೆಟ್ ಕುರಿತ ವಿಶೇಷ ಸಂವಾದ ಮೂಡಿಬರಲಿದೆ.

<><><>

ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಬಜೆಟ್‌ನಲ್ಲಿ ವಿಶೇ ’ ಆದ್ಯತೆ ನೀಡಬೇಕು; ಈ ಭಾಗದ ಮೂಲಸೌಕರ್ಯ, ಕೃಷಿ, ಉದ್ಯೋಗ ಹಾಗೂ ಶಿಕ್ಷಣ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡುವಂತೆ, ಮುಖ್ಯಮಂತ್ರಿ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾಗಿ, ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ ತಿಳಿಸಿದ್ದಾರೆ. ಹಿಂದುಳಿದ ಪ್ರದೇಶ, ಕಲ್ಯಾಣ ಕರ್ನಾಟಕ ಸೇರಿದಂತೆ, ಸಮಗ್ರ ಉತ್ತರ ಕರ್ನಾಟಕದ ಅಭಿವೃದ್ಧಿಗೆ, ರಾಜ್ಯ ಸರ್ಕಾರದ ಇಂದಿನ ಬಜೆಟ್‌ನಲ್ಲಿ, ಪ್ರಾಶಸ್ತ್ಯ ನೀಡುವಂತೆ ಒತ್ತಾಯಿಸಿದ್ದಾರೆ.

<><><>

ಈ ಮಧ್ಯೆ, ವಿಧಾನಸೌಧದ ಮೊಗಸಾಲೆಯಲ್ಲಿ, ಬಿಜೆಪಿ–ಜೆಡಿಎಸ್ ಶಾಸಕರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಮೊತ್ತವನ್ನು, 2 ರಿಂದ 5 ಕೋಟಿ ರೂಪಾಯಿಗಳಿಗೆ ಹೆಚ್ಚಿಸುವಂತೆ, ಮನವಿ ಸಲ್ಲಿಸಿತು.

<><><>

ರಾಜ್ಯದಲ್ಲಿ ಸೈಬರ್ ಅಪರಾಧಗಳನ್ನು ತಡೆಗಟ್ಟಲು ಮತ್ತು ಪತ್ತೆಹಚ್ಚಲು, ಪ್ರತ್ಯೇಕ ಪೊಲೀಸ್ ಮಹಾ ನಿರ್ದೇಶಕರ ಹುದ್ದೆಯನ್ನು ಸೃಜಿಸಲಾಗಿದೆ ಎಂದು, ಗೃಹ ಖಾತೆ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ. ವಿಧಾನ ಪರಿಷತ್ತಿನ, ಪ್ರಶ್ನೋತ್ತರ ಕಲಾಪದ ವೇಳೆ, ಶಾಸಕ ಎಸ್.ಎಲ್. ಭೋಜೇಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಅವರು, ಉತ್ತರಿಸಿದರು. ಎ.ಡಿ.ಜಿ.ಪಿ, ಐ.ಜಿ.ಪಿ ಹಾಗೂ 7 ಜನ ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿ, ಈ ತಂಡದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಸೈಬರ್ ಅಪರಾಧಗಳ ಬಗ್ಗೆ ದೂರುಗಳನ್ನು ಸ್ವೀಕರಿಸಿ, ಕೂಡಲೇ ಸೂಕ್ತ ಕ್ರಮ ವಹಿಸಲಾಗುತ್ತಿದೆ ಎಂದು, ಅವರು ಹೇಳಿದರು.

<><><>

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಡಿ, 270 ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿವೆ; ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ, ಒಟ್ಟು 29 ಸಾವಿರದ 867 ವಿದ್ಯಾರ್ಥಿಗಳಿಗೆ, ಪ್ರವೇಶ ಕಲ್ಪಿಸಲಾಗಿದೆ ಎಂದು, ಸಚಿವ ಎನ್.ಎಸ್. ಬೋಸರಾಜು ವಿಧಾನ ಪರಿಷತ್ತಿಗೆ ತಿಳಿಸಿದ್ದಾರೆ. ಪ್ರಶ್ನೋತ್ತರ ಕಲಾಪದ ವೇಳೆ, ಶಾಸಕ ಡಿ.ಟಿ. ಶ್ರೀನಿವಾಸ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ, ಅವರು ಉತ್ತರಿಸಿದರು. 5 ಸಾವಿರದ 929 ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳಿಗೆ, ಹೆಚ್ಚುವರಿಯಾಗಿ ಪ್ರವೇಶ ನೀಡಲಾಗಿದೆ ಎಂದರು.

<><><>

ಥೈಲ್ಯಾಂಡ್‌ನ ಚಿಯಾಂಗ್ ಮಾಯ್ ಪ್ರಾಂತ್ಯದಲ್ಲಿ, ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ ಏರ್ಪಡಿಸಿರುವ, ಎಸ್ಟ್ರಾನೊಮಿ ಕ್ಯಾಂಪ್‌ಗೆ, ಧಾರವಾಡ ಜಿಲ್ಲೆ ಹುಬ್ಬಳ್ಳಿಯ, ಪ್ರಧಾನಮಂತ್ರಿ ಕೇಂದ್ರೀಯ ವಿದ್ಯಾಲಯದ, 10ನೇ ತರಗತಿ ವಿದ್ಯಾರ್ಥಿನಿ, ಕೃಷಿ ಸಂಗಮೇಶ ಮೆಣಸಿನಕಾಯಿ ಆಯ್ಕೆಯಾಗಿದ್ದಾರೆ.

ಯುನೆಸ್ಕೋದ ಅಂತಾರಾಷ್ಟ್ರೀಯ ಖಗೋಳ ತರಬೇತಿ ಕೇಂದ್ರ, ವಿಶ್ವದ ನಾನಾ ದೇಶಗಳಿಂದ ಭಾಗವಹಿಸಿದ್ದ, 316 ವಿದ್ಯಾರ್ಥಿಗಳ ಪೈಕಿ, ಒಟ್ಟು 30 ವಿದ್ಯಾರ್ಥಿಗಳನ್ನು ಶಿಬಿರಕ್ಕೆ ಆಯ್ಕೆ ಮಾಡಿದೆ. ಪ್ರದೇಶ ಸಮಾಚಾರಕ್ಕಾಗಿ, ಕೃಷಿ ಮೆಣಸಿನಕಾಯಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಕೃಷಿ ಸಂಗಮೇಶ ಮೆಣಸಿನಕಾಯಿ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ವಿಶ್ವದ ಮೂರನೇ ಒಂದು ಭಾಗದಷ್ಟು ಆಹಾರ ಉತ್ಪಾದನೆಗೆ, ಜೇನು ದುಂಬಿಗಳು ಸಹಕಾರಿಯಾಗಿವೆ; ಶೇಕಡ 73 ರಷ್ಟು ಜೇನು ನೊಣಗಳ ನೇರ ಪರಾಗಸ್ಪರ್ಷ ಇದಕ್ಕೆ ಕಾರಣ ಎಂದು, ಹೊಸ ದಿಲ್ಲಿಯ ಸಸ್ಯ ಸಂರಕ್ಷಣೆ ಮತ್ತು ಜೈವಿಕ ಸುರಕ್ಷತೆಯ, ಸಹಾಯಕ ಮಹಾ ನಿರ್ದೇಶಕಿ ಪೂನಂ ಜಸ್ರೋಟಿಯಾ ಹೇಳಿದ್ದಾರೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ, ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ, ಹೊಸ ದಿಲ್ಲಿಯ ರಾಷ್ಟ್ರೀಯ ಜೇನು ಮಂಡಳಿ ಆಯೋಜಿಸಿದ, "ಜೇನು ಸಾಕಣೆಯಲ್ಲಿ ಹೊಸ ಆಯಾಮಗಳು" ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ, ಪಾಲ್ಗೊಂಡು, ಅವರು ಮಾತನಾಡಿದರು.

<><><>

ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ತೋಟಗಾರಿಕೆ ಆಯುಕ್ತ, ಪ್ರಭಾತ್‌ಕುಮಾರ್, ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು, ಜೇನು ಕೃಷಿಯಲ್ಲಿ ಅಧಿಕ ಇಳುವರಿ ಪಡೆಯಬಹುದು ಎಂದರು.

<><><>

ಇಂದು 'ಜನೌಷಧಿ' ದಿನ. ಜನೌಷಧಿಯ 7ನೇ ವಾರ್ಷಿಕೋತ್ಸವ. 'ಕಡಿಮೆ ಬೆಲೆ; ಅತ್ಯುತ್ತಮ ಔಷಧ' ಧ್ಯೇಯದೊಂದಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಒತ್ತಾಸೆಯ ಮೇರೆಗೆ, ಪ್ರತಿ ವರ್ಷ ಮಾರ್ಚ್ 7 ರಂದು, "ಜನ್ ಔ 'ಧಿ ದಿನ" ಆಚರಿಸಲಾಗುತ್ತಿದೆ. ಜನೌಷಧಿ ಯೋಜನೆ ಬಗ್ಗೆ, ಜನ ಜಾಗೃತಿ ಮೂಡಿಸಲು ಮತ್ತು 'ಜೆನೆರಿಕ್ ಔ 'ಧಿ'ಗಳನ್ನು ಉತ್ತೇಜಿಸಲು, ಸಪ್ತಾಹ ಪೂರ್ತಿ ಕಾರ್ಯಕ್ರಮಗಳು ಜರುಗಿದವು.

<><><>

“ಜನ್ ಔಷಧಿ ದಿವಸ್” ಹಿನ್ನೆಲೆ, ಕೇಂದ್ರದ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳ ರಾಜ್ಯ ಖಾತೆ ಸಚಿವರಾದ, ಶೋಭಾ ಕರಂದ್ಲಾಜೆ ಅವರು, ಇಂದು ಬೆಳಗ್ಗೆ 9.45ಕ್ಕೆ, ಬೆಂಗಳೂರಿನ ಯಶವಂತಪುರದ, ಪ್ರಧಾನಮಂತ್ರಿ ಭಾರತೀಯ ಜನೌಷಧಿ ಕೇಂದ್ರಕ್ಕೆ ಭೇಟಿ ನೀಡಲಿದ್ದಾರೆ.

<><><>

ಕೊಪ್ಪಳ ಜಿಲ್ಲೆ, ಕಾರಟಗಿ ತಾಲೂಕಿನ ‘ಅರಿವು ಕೇಂದ್ರ’ದ ಪುಸ್ತಕಗಳ ನೆರವಿನಿಂದ, ಪ್ರತಿಭಾವಂತ ವಿದ್ಯಾರ್ಥಿ ನಾಗರಾಜ, ಗ್ರಾಮ ಲೆಕ್ಕಾಧಿಕಾರಿ ಹುದ್ದೆಗೆ ಆಯ್ಕೆಯಾಗಿರುವುದು ಸಂತಸದ ಸಂಗತಿ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ವಿಷಯ ಪ್ರಕಟಿಸಿರುವ ಸಚಿವರು, ಗ್ರಾಮೀಣ ಗ್ರಂಥಾಲಯಗಳನ್ನು ಮೇಲ್ದರ್ಜೆಗೇರಿಸಿದ, ಅರಿವು ಕೇಂದ್ರಗಳು, ಕನಸು ಹೊತ್ತವರಿಗೆ ನೆರವು ಕೇಂದ್ರಗಳಾಗಿವೆ ಎಂದಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ನಾಗರಾಜ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ನಾಗರಾಜ ಧ್ವನಿ 25 ಸೆಕೆಂದುಗಳು

<><><>

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ, ಕಣ್ಣಿನ ಆರೈಕೆ ಸೇವೆ ಖಾತ್ರಿ ಪಡಿಸಲು, ರಾಜ್ಯ ಸರ್ಕಾರ, **ZEISS** ಇಂಡಿಯಾ ಸಂಸ್ಥೆಯೊಂದಿಗೆ, ಒಡಂಬಡಿಕೆ ಮಾಡಿಕೊಂಡಿದ್ದಾಗಿ, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಕಲಬುರಗಿ ಜಿಲ್ಲೆಯಲ್ಲಿ, 11 ಲಕ್ಷ ಜನರಿಗೆ, ನೇತ್ರ ಪರೀಕ್ಷೆ ಹಾಗೂ ಅಗತ್ಯವುಳ್ಳವರಿಗೆ, ಉಚಿತ ಕನ್ನಡಕ ವಿತರಿಸುವ, ‘ವಿದ್ಯಾ ದೃಷ್ಟಿ’ ಕಾರ್ಯಕ್ರಮ, ಜಾರಿಗೊಳಿಸಲಾಗಿದೆ, ಎಂದರು. ಕಲಬುರಗಿ ಜಿಲ್ಲೆಯಲ್ಲಿ 5 ಲಕ್ಷ 32 ಸಾವಿರ ಶಾಲಾ ಮಕ್ಕಳಿಗೆ, ಹೆಚ್ಚುವರಿಯಾಗಿ 6 ಲಕ್ಷ ಬಡ ವಯಸ್ಕರಿಗೆ, ಉಚಿತ ಕಣ್ಣಿನ ಪರೀಕ್ಷೆ ಅಭಿಯಾನ ಶೀಘ್ರ ಆಯೋಜಿಸುವುದಾಗಿ, ಹೇಳಿದರು.

<><><>

ಆಕಾಶವಾಣಿ ಮೈಸೂರು ಕೇಂದ್ರ, ಸಾರ್ಥಕ ಸೇವೆಯ, 90 ವರ್ಷಗಳನ್ನು ಪೂರ್ಣಗೊಳಿಸಿದ ಹಿನ್ನೆಲೆ, ಇಂದು ಬೆಳಗ್ಗೆ 7.30ಕ್ಕೆ, ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ, ಆಕಾಶವಾಣಿ ಕೇಂದ್ರದ ವರೆಗೆ, ಸೈಕಲ್ ಜಾಥಾ ಜರುಗಲಿದೆ. ಆಕಾಶವಾಣಿ ಸುದ್ದಿ ವಿಭಾಗದ ಮಹಾ ನಿರ್ದೇಶಕಿ, ಹೊಸ ದಿಲ್ಲಿಯ ಡಾಕ್ಟರ್ ಪ್ರಜ್ಞಾ ಪಾಲೀವಾಲ್ ಗೌರ್, ಜಾಥಾದಲ್ಲಿ ಭಾಗವಹಿಸಲಿದ್ದಾರೆ.

<><><>

ಪ್ರಸಾರ ಭಾರತಿ ಸಹಕಾರದಲ್ಲಿ, ಸಂಜೆ 5.30ಕ್ಕೆ, ಮೈಸೂರಿನ ಮೈಸೂರಿನ ಯಾದವಗಿರಿಯ, ಆಕಾಶವಾಣಿ ಕೇಂದ್ರದ ಆವರಣದಲ್ಲಿ, ‘ನುಡಿ ನಾದ ಸಂಗಮ’ ವಿಶೇಷ ಕಾರ್ಯಕ್ರಮ ನಡೆಯಲಿದೆ.

<><><>

ಡಾಕ್ಟರ್ ಎಂ.ವಿ. ಗೋಪಾಲಸ್ವಾಮಿ ಹಾಗೂ ನಾ. ಕಸ್ತೂರಿ ಅವರ ಕುಟುಂಬದವರು ಸೇರಿದಂತೆ, ವಿಶೇಷ ಆಹ್ವಾನಿತ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಉಪ ಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಹಾಗೂ ದೇವನಹಳ್ಳಿ ಕಚೇರಿಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

<><><>

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕಿನ, ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ರಕ್ಷಣೆಗೆ, ದೇಶದಲ್ಲೇ ಮೊದಲ ಸ್ನಿಫರ್ ಹಾಗೂ ಟ್ರ್ಯಾಕಿಂಗ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರ, ಕಾರ್ಯಾರಂಭಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇಂದು ಬೆಳಗ್ಗೆ 10.15ಕ್ಕೆ, ಬಜೆಟ್ ಮಂಡನೆ: ಕೃಷಿ, ಆರೋಗ್ಯ ಹಾಗೂ ಶಿಕ್ಷಣಕ್ಕೆ ಒತ್ತು – ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ.
- ಸಮಗ್ರ ಉತ್ತರ ಕರ್ನಾಟಕದ ಅಭಿವೃದ್ಧಿಗೆ, ರಾಜ್ಯ ಬಜೆಟ್‌ನಲ್ಲಿ, ಪ್ರಾವಧಾನಕ್ಕೆ ವಿಪಕ್ಷಗಳ ಒತ್ತಾಯ.
- ವಿಶ್ವದ ಮೂರನೇ ಒಂದು ಭಾಗದಷ್ಟು ಆಹಾರ ಉತ್ಪಾದನೆಗೆ, ಜೇನು ನೊಣಗಳು ಸಹಕಾರಿ – ಪೂನಂ ಜಸ್ರೋಟಿಯಾ.
- ಇಂದು 'ಜನೌಷಧಿ' ದಿನ: 'ಕಡಿಮೆ ಬೆಲೆ, ಅತ್ಯುತ್ತಮ ಔಷಧ' ಧ್ಯೇಯದೊಂದಿಗೆ, 7ನೇ ವಾರ್ಷಿಕೋತ್ಸವ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>